ಓ.ಎಸ್.ನಂ.354/2016

ಪಿ.ಡಬ್ಲ್ಯು:1

**ದಿನಾಂಕ:26.03.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ.ಬಿ.ಆರ್. ವಕೀಲರಿಂದ:**

ನಿಪಿ-1 ರ ದಾಖಲೆಯ ಶೀರ್ಷಿಕೆಯಲ್ಲಿ ತಿದ್ದುಪಡಿ ಮಾಡಲಾಗಿದ್ದು, ಅಲ್ಲಿ ಯಾವುದೇ ಸಹಿ ಮಾಡಿರುವುದಿಲ್ಲ ಅಂದರ ಸರಿ, ಆ ಬಗ್ಗೆ ನಿಮಗೆ ಗೊತ್ತಿಲ್ಲ ಅಂದರೆ ಸರಿ. ಸದರಿ ಶೀರ್ಷಿಕೆಯ ಬರಹದಲ್ಲಿ ಕ್ರಯ ಎಂಬುದನ್ನು ಟೈಪ್ರರೈಟರ್ ಮುಖೇನ ಬರೆದಿದ್ದು, ಉಳಿದದ್ದನ್ನು ಕಂಪ್ಯೂಟರ್ ನಲ್ಲಿ ಮುದ್ರಿಸಲಾಗಿದೆ ಅಂದರೆ ಸರಿ. ನಿಪಿ-1 ರ ದಾಖಲೆಯನ್ನು ಬರೆಯಲು ಪೇಪರನ್ನು ನಾನೇ ತಂದಿರುತ್ತೇನೆ. ಆ ದಿನ ಒಟ್ಟು 3 ಪೇಪರ್ ಗಳನ್ನು ತಂದಿರುತ್ತೇನೆ. ಯಾರ ಹೆಸರಿನಲ್ಲಿ ತಂದಿದ್ದೇನೆ ಎಂದು ಹೇಳಲಾಗುವುದಿಲ್ಲ. ನಿಪಿ-1 ಕರಾರಿನಲ್ಲಿ ನಮೂದಿಸಿರುವ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ: ಶಿವಣ್ಣನವರ ಜಮೀನು, ದಕ್ಷಿಣಕ್ಕೆ: ಗಂಗಣ್ಣರವರ ಜಮೀನು, ಉತ್ತರಕ್ಕೆ:ರಸ್ತೆ, ಮತ್ತು ಪಶ್ಚಿಮಕ್ಕೆ: ರಸ್ತೆ ಮತ್ತು ಗಂಗಣ್ಣ ರವರ ಜಮೀನು ಬರುತ್ತದೆ. ದಾವೆಯಲ್ಲಿಯೂ ಸಹ ಇದೇ ಚಕ್ಕುಬಂದಿಯನ್ನು ಬರೆಸಿದ್ದೀಯಾ ಅಂದರೆ, ಸಾಕ್ಷಿಯು ಮರೆತುಹೋಗಿದೆ ಎಂದು ನುಡಿಯುತ್ತಾರೆ. ನಿಪಿ-3 ನೋಟೀಸನ್ನು ಪ್ರತಿವಾದಿಗಳಿಗೆ ಕಳುಹಿಸಿದ ಬಗ್ಗೆ ಮತ್ತು ಅವರ ಸ್ವೀಕರಿಸಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿ. ನಿಪಿ-3 ನೋಟೀಸನ್ನು ಪ್ರತಿವಾದಿಗಳಿಗೆ ಕಳುಹಿಸಿಲ್ಲ ಅಂದರೆ ಸರಿಯಲ್ಲ. ನಿಪಿ-3 ರ ನೋಟೀಸಿನಲ್ಲಿ ನಮೂದಿಸಿರುವ

ಪಿ.ಡಬ್ಲ್ಯುಃ1

3,5,7,8 ಮತ್ತು 9 ರವರು ಸಹ ಸರ್ವೇನಂಬರ್ 123 ರ ಆಸ್ತಿಯ ಮಾಲೀಕರು ಎಂದು ತಿಳಿಸಿದ್ದೇನೆ ಅಂದರೆ ಗೊತ್ತಿಲ್ಲ. ಆ ರೀತಿಯಾಗಿ ಬರೆದಿದ್ದರೂ ಸಹ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ನಿಪಿ-1 ಕರಾರಿನಲ್ಲಿ ಧನಂಜಯಮೂರ್ತಿ, ಪಾರ್ವತಮ್ಮ ಮತ್ತು ಇತರರ ಸಹಿಗಳು ಇರುವುದಿಲ್ಲ ಅಂದರೆ ಸರಿ. ನಿಪಿ-1 ರ ದಾಖಲೆಯನ್ನು ನಾನೇ ಸೃಷ್ಠಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನಿಂದ ಯಾವುದೇ ಹಣ ಪಡೆದಿರುವುದಿಲ್ಲ ಮತ್ತು ನಿಪಿ-1 ರ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಅನುಸೂಚಿ.2 ನೇ ಸ್ವತ್ತಿಗೆ ಪ್ರತಿವಾದಿ ಒಬ್ಬನೇ ಮಾಲೀಕನಲ್ಲ ಮತ್ತು ಅದರ ಖಾತೆಯು ಪ್ರತಿವಾದಿ ಮತ್ತು ಇತರರ ಹೆಸರಿನಲ್ಲಿ ಜಂಟಿಯಾಗಿರುತ್ತದೆ ಅಂದರೆ ಸರಿಯಲ್ಲ. ಪ್ರತಿವಾದಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಅಂದರೆ ಸರಿ. ನಿಪಿ-1 ಕರಾರಿಗೆ ಸದರಿ ಹೆಣ್ಣು ಮಕ್ಕಳ ಸಹಿ ಪಡೆದಿರುತ್ತೇನೆ ಅಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ದಿ.ನ್ಯಾ.& ಪ್ರಃದಃನ್ಯಾಃದಂ.,ರವರು,
ಕಡೂರು.